RAMAIAH UNIVERSITY OF APPLIED SCIENCES

**ಕನ್ನಡ ಸೌರಭ, ಸಂಪುಟ 2, ಸಂಚಿಕೆ 1, ಫೆಬ್ರುವರಿ, 2018**

# ಸಿಂಬಿಗಲ್ಲು ಗವಿ ಬೆಟ್ಟ

ಕೊಡಗಿನಲ್ಲಿ ಹುಟ್ಟಿಬೆಳೆದ ನನಗೆ ಇಂದಿಗೂ ಅಲ್ಲಿನ ಹೊಸ ತಾಣಗಳನ್ನು ಅರಸುವ ತುಡಿತ. ಉಚ್ಚಂಗಿಯಲ್ಲಿನ ನೆಂಟರು ಊರಿಗೆ ಬರುತ್ತಿದ್ದಾಗ ಅಲ್ಲಿನ ಬೆಟ್ಟಗುಡ್ಡಗಳ ಬಗ್ಗೆ ಹೇಳುತ್ತಿದ್ದರು. ಆಗಿನ ಕಾಲದಲ್ಲಿ ಕಾಡುಪ್ರಾಣಿಗಳು ಯಥೇಚ್ಛವಾಗಿ ಇರುತ್ತಿದ್ದುದರಿಂದ ಚಾರಣ ಹೋಗಲು ಅಂಜುತ್ತಿದ್ದರು. ಉಚ್ಚಂಗಿಯಲ್ಲಿನ ಗಿರಿಗಳ ಬಗ್ಗೆ ಕೇಳಿದ್ದ ನಾನು ಎರಡು ಬಾರಿ ಮಾರ್ಗದರ್ಶಿ ಇಲ್ಲದೆ ಸ್ನೇಹಿತರೊಡನೆ ಹೋಗಿ ಸರಿಯಾದ ಜಾಗ ತಲುಪದೆ ನಿರಾಸೆಯಾಗಿದ್ದುಂಟು. ಆದರೆ ಈ ಬಾರಿ ಹಾಗಾಗಲಿಲ್ಲ. ಮಾರ್ಗದರ್ಶಿಯ ಸಮೇತ ಹುಲಗತ್ತೂರಿನ ಸಿಂಬಿಗಲ್ಲು ಗವಿ ಬೆಟ್ಟ ನೋಡಲು ನಾವೆಲ್ಲ ಸ್ನೇಹಿತರು ಚಾರಣ ಆರಂಬಿಸಿಯೇ ಬಿಟ್ಟೆವು. ಸುಮಾರು ಒಂದು ಘಂಟೆಯ ನಡಿಗೆ ಬೆಟ್ಟದ ಮೇಲೆ ವಿಶಾಲವಾದ ಮೈದಾನಕ್ಕೆ ಸಾಗಿತು. ತಣ್ಣನೆ ಗಾಳಿ, ಕಣ್ಣು ಹಾಯಿಸಿದಷ್ಟು ಹಸಿರು, ಬೆಟ್ಟ ಗುಡ್ಡಗಳು, ತೊರೆಗಳು ಪ್ರಯಾಣದ ಆಯಾಸವನ್ನು ಇಂಗಿಸಿದವು. ಬಲ ಭಾಗದಲ್ಲಿ ಚಾರಣ ಮಾಡಿದ ನಾವು ಆಕರ್ಷಕ ಶಿಲ್ಪಕೃತಿ ಸಿಂಬಿಗಲ್ಲನ್ನು ತಲುಪಿದೆವು. ತಲೆಯಮೇಲೆ ಬಿಂದಿಗೆ ಇರಿಸಿ ಕೊಳ್ಳಲು ಉಪಯೋಗಿಸುವ ಸಿಂಬಿಯನ್ನು ನೆನಪಿಸುವಂತಿರುವ ಕಲ್ಲಿಂದ ಈ ಹೆಸರು.

ಮುಂದೆ ನಮ್ಮ ತಂಡ ಗವಿಯನ್ನು ನೋಡುವ ತವಕದಲ್ಲಿ ಬೇರೊಂದು ಕಡೆಯಿಂದ ಕಡಿದಾದ ಇಳಿಜಾರಿನಲ್ಲಿ ಇಳಿಯತೊಡಗಿದೆವು. ಅಲ್ಲಲ್ಲಿ ಜಿಗಣೆಗಳು ನಮ್ಮನ್ನು ಮುದ್ದಿಸಿದವು. ಚೇಳುಗಳು ಕೂಡ ಅಲ್ಲಿ ಕಂಡವು. ಗವಿ ತಲಪಲು ಕಿರಿದಾದ ಕಿಂಡಿಯನ್ನು ನುಸುಳಿ ದಾಟಬೇಕು. ಅದೊಂದು ರೋಮಾಂಚಕಾರಿ ಅನುಭವ. ಗುಹೆ ಸೇರಿದೊಡನೆ ಸಾಕಷ್ಟು ಬಾವಲಿಗಳು ಸ್ವಾಗತಿಸಿದವು. ಕಿರಿದಾದ ಜಾಗದಲ್ಲಿ ಮುಂದೆ ಹೋದರೆ ಅಲ್ಲಿ ಕಗ್ಗತ್ತಲ ಗವಿ. ಟಾರ್ಚ್ ಬೆಳಕಿನಲ್ಲಿ ಮುಂದೆ ಹೋಗಿ ಈಶ್ವರ ಲಿಂಗ ದರ್ಶನ ಪಡೆದೆವು. ಅಲ್ಲಿ ಕುರೂಪಿ ತಜ್ಞರು ತಮ್ಮ ಕೈಚಳಕ ತೋರಿದ್ದರು. ಅಲ್ಲಲ್ಲಿ ಎಸೆದ ಕಸ ಬೇಸರ ತಂದಿತು. ನಮ್ಮ ಜನಕ್ಕೆ ಅರಿವು ಮೂಡುವುದು ಯಾವಾಗಲೋ?



ಚಂಗಡ ಹಳ್ಳಿಯಲ್ಲಿ ಮೊದಲೇ ಹೇಳಿದ್ದರೆ ಊಟ ಉಪಹಾರದ ವ್ಯವಸ್ಥೆ ಸ್ಥಳೀಯ ಹೋಟೆಲ್‌ನವರು ಮಾಡಿಕೊಡುತ್ತಾರೆ. ಅಥವಾ ಮನೆಯಿಂದ ತಿಂಡಿ ತೆಗೆದುಕೊಂಡು ಹೋದರೂ ಆದೀತು. ಬಹಳ ಖುಷಿಯಿಂದ ಸುಂದರ ತಾಣವನ್ನು ಸಂದರ್ಶಿಸಿದ ಮನಸ್ಸಿನಿಂದ ಬಂದೆವು.

**ಡಾ. ರಾ. ಲ. ಜಗದೀಶ**

jagadishkanive@gmail.com